ಅಕ್ಷಯಸೂತ ಅಡಗುವ ಕಾಲವನ್ನು ನಿ
ರೀಕ್ಷಿಸಿ ನೋಡುತ್ತಿದ್ದಳು ॥ ೮೩ ॥

ಮತ್ತೆ ಮಾಲಕ್ಷ್ಮಿ ಪಚ್ಚಕರ್ಪೂರ ಪುನಗಿನ
ಎಣ್ಣೆ ಸಂಪಿಗೆಯ ತೈಲ ।
ಕಸ್ತೂರಿ ಬೆರೆಸಿದ ಬಿಸಿನೀರು ಅರಿಸಿನ
ಹಚ್ಚಿ ತಾನೆರಕೊಂಡಳಾಗ ॥ ೮೪ ॥

ಸುರಳುಂಗುರಳಿಗೆ ಬೈತಲೆ ತಿದ್ದಿ ತಳುಪ್ಹಾಕಿ
ಚೌರಿ ರಾಗುಟೆ ಚಂದ್ರಗೊಂಡೆ ।
ಗಿಳಿಗೆಜ್ಜೆ ಹೆರಳು ಬಂಗಾರ ಕೇದಿಗೆ ಮೇಲೆ
ಅರಳು ಮಲ್ಲಿಗೆ ಮಾಲೆ ಮುಡಿದು ॥ ೮೫ ॥

ಬಿಚ್ಚಿ ತಾನುಟ್ಟಳು ಬಿಳಿಯ ಪೀತಾಂಬರ
ಬಿಚ್ಚಿ ವಜ್ರದ ಸೆರಗ್ಹೊದ್ದು ।
ಕುತ್ತಣಿ ಕುಪ್ಪಸ ಮುತ್ತಿನ ಗೊಂಡೆ ತೋಳಿಗೆ
ಕಟ್ಟುತ್ತಿದ್ದಳು ಬಾಜು ಬಂದು ॥ ೮೬ ॥

ವಜ್ರದ ವಂಕಿ ನಾಗಮುರಿಗಿಯಡ್ಡಿಕೆ
ಗೆಜ್ಜೆಡ್ಡಿಕೆ ಕೊರಳಲ್ಲಿ ।
ದೊಡ್ಡ ಸರಿಗೆ ಮೇಲಡ್ಡಿಕೆ ಮುತ್ತಿನ ಕೆಂಪು
ಥಳಕು ಬಳಕು ಹೊಳೆಯುತಲಿ ॥ ೮೭ ॥

ಪುತ್ತಹಳಿಸರ ಚಂದ್ರಹಾರ ಮೋಹನಮಾಲೆ
ಕಟ್ಟಿದಳಾಗ ಕಂಠಿ ಕಟ್ಟಾಣಿ ।
ಪಚ್ಚೆ ಮಾಣಿಕ್ಯ ರತ್ನ ಪದಕ ಅದರ ಮೇಲೆ
ಜತ್ತಾಗಿ ನಡೆದಾಡುತಿರಲು ॥ ೮೮ ॥

ಕಡಗಂಕಣಹಸ್ತ ಕಡಗಕಮಲದ್ವಾರ
ನಡುವಿಗೆ ನವರತ್ನ ಪಟ್ಟಿ ।
ಬಿಡಿ ಮುತ್ತು ಬಿಗಿದೊಜ್ರವಾಲೆ ಬುಗುಡಿ ಚಂದ
ಮುರುವು ಮುತ್ತಿನ ಸರಪಣಿಯ ॥ ೮೯ ॥

ಸಾಲು ಕುಂದಣಮುತ್ತಿನ ಮುಖರೆ
ಬುಲಾಕು ಜಾಲಕದೊಳ್ವಜ್ರದ್ವರಳು ।
ತಿಳಿ ಕಾಡಿಗೆ ಹಚ್ಚಿ ತಿದ್ದಿ ಕುಂಕುಮ ಹಚ್ಚಿ
ಮೇಲೆ ಜೋಳದ ಕುಡಿಯಂತೆ ॥ ೯೦ ॥

ಪಿಲ್ಲೆ ಕಾಲುಂಗುರ ಲುಲ್ಲು ಪೈಜಣರುಳಿ
ಘಲ್ಲು ಘಿಲ್ಲೆಂದ್ಘೆಜ್ಜೆಯನಿಡುತ ।
ತೆಳ್ಳನೆ ಪಾದ ಪುತ್ಥಳಿಯಂತೆ ಚಿನ್ನದ
ಬಳ್ಳಿಯಂದದಲಿ ಬಳುಕುತಲಿ ॥ ೯೧ ॥

ಬೆಳ್ಳನೆ ಬೆಳ್ಳಿಯ ಮಿಳ್ಳಿ ತನ್ನುಂಗುರ
ಬಳ್ಳಿನಲಿ ಹಿಡಿದಲ್ಲಾಡಿಸುತಲಿ ।
ಗಲ್ಲ ಮಿಂಚುಗಳಂತೆ ಥಳಥಳಿಸುತ ಬೀದಿ
ಯಲಿ ಬಂದಳು ಗಜಗಮನೆ ॥ ೯೨ ॥

ದೇವಲೋಕದಿಂದ ಇಳಿದಿಲ್ಲಿ ಬಂದಳೋ
ಹರಸತಿಯ ಅರಸುತಲೆ ।
ಮೋರೆ ನೋಡಲು ಮೂರ್ಛೆ ಬರುವುದು ದಾರೋ
ಮುಂಗಾರಿ ಮಿಂಚುಗಳಂತೆ ತೋರುವುದು ॥ ೯೩ ॥

ಇಂದ್ರನರಸಿಯೋ ಚಂದ್ರಮನ ರೋಹಿಣಿಯೋ
ಸುಂದರ ಸೂರ್ಯನರಸಿಯೋ ಸತಿಯೋ ।
ಗಂಧರ್ವನರಸಿಯೋ ಗಗನದಿಂದಿಳಿದಂತೆ
ಗಂಗಾ ಶ್ಯಾಮಲೆ ಸೀತಾಂಗನೆಯೋ ॥ ೯೪ ॥

ರತಿಯೊ ರೇವತಿಯೊ ಅರುಂಧತಿಯೊ ಪಾರ್ವತಿಯೊ
ಭಾರತಿ ಭಾಗ್ಯವಂತೆ ಸರಸ್ವತಿಯೊ ।
ಪತಿಗಳೈವರ ಸತ್ಯಪಾಂಡವರರಸಿಯೊ ದ್ರೌ
ಪದಿ ಬಂದಳಿಲ್ಲಿಗೆಂಬುವರು ॥ ೯೫ ॥

ಸತ್ಯಭಾಮೆಯೋ ರುಕ್ಮಿಣಿ ಜಾಂಬುವಂತೆಯೊ

